**ದಿನಾಂಕ: 03.12.2012ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ಸಭಾ ನಡಾವಳಿಗಳು**

ಸಂಖ್ಯೆ: 388.
ದಿನಾಂಕ: 3/1/13
ಆಡಳಿತಾಧಿಕಾರಿ ನಿರ್ದೇಶಕರು

**ಸಭೆಯಲ್ಲಿ ಹಾಜರಿದ್ದವರು**

| | | |
|---|---|---|
| 1. | ಸರ್ಕಾರದ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ),<br>ಕರ್ನಾಟಕ ಸರ್ಕಾರ, ಬೆಂಗಳೂರು. | ಅಧ್ಯಕ್ಷರು |
| 2. | ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು,<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ | ಸದಸ್ಯರು |
| 4. | ಮುಖ್ಯಆಡಳಿತಾಧಿಕಾರಿಗಳು (ಪ್ರಭಾರ)<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ | ಸದಸ್ಯರು |
| 5. | ಆರ್ಥಿಕ ಸಲಹೆಗಾರರು,<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ. | ಸದಸ್ಯ ಕಾರ್ಯದರ್ಶಿಗಳು |
| 6. | ವೈದ್ಯಕೀಯ ಅಧೀಕ್ಷಕರು,<br>ಬೋಧಕ ಆಸ್ಪತ್ರೆ,<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ. | ವಿಶೇಷ ಆಹ್ವಾನಿತರು |

ಪ್ರಾರಂಭದಲ್ಲಿ ಆರ್ಥಿಕ ಸಲಹೆಗಾರರು ಹಾಗೂ ಸದಸ್ಯ ಕಾರ್ಯದರ್ಶಿ, ಹಣಕಾಸು ಸಮಿತಿ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹಣಕಾಸು ಸಮಿತಿ ಸಭೆಯಲ್ಲಿ ಹಾಜರಿರುವ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು. ನಂತರ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು. ಸರ್ಕಾರದ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಣಕಾಸು ಸಮಿತಿ ಸಭೆಯ ಸಭಾಸೂಚಿ (ಅಜೆಂಡಾ)ಯನ್ನು ವಿಷಯವಾರು ಚರ್ಚೆಗೆ ತೆಗೆದುಕೊಳ್ಳಲು ಸೂಚಿಸಿದರು.

**ವಿಷಯ ಸಂಖ್ಯೆ 01 : ದಿನಾಂಕ:21.09.2011 ರಂದು ಜರುಗಿದ ಮಿಮ್ಸ್ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿಗಳ ಬಗ್ಗೆ ಕೈಗೊಂಡ ಅನುಪಾಲನಾ ವರದಿ.**

ಹಿಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಕೈಗೊಂಡ ನಡವಳಿಗಳಿಗೆ ಅನುಪಾಲನಾ ವರದಿಯನ್ನು (ಅನುಬಂಧ-1 ) ನೀಡಿರುವುದನ್ನು ಸಭೆಯಲ್ಲಿ ಓದಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ 02: ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2012-13ನೇ ಸಾಲಿನ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸ್ಥೂಲ ವಿವರ.**

**ತೀರ್ಮಾನ**:- 2012-13ನೇ ಸಾಲಿನ ಸಂಸ್ಥೆಯ ಸ್ಥೂಲ ಆರ್ಥಿಕ ಪರಿಸ್ಥಿತಿಯನ್ನು ಸಭೆಯ ಮುಂದೆ ಮಂಡಿಸಲಾಯಿತು. ಅಗತ್ಯವಿರುವ ಅನುದಾನ ಹಾಗೂ ವೆಚ್ಚದ ವಿವರಗಳನ್ನು ಸಲ್ಲಿಸಲು ತಿಳಿಸಿ ಸರ್ಕಾರದಿಂದ ಅನುದಾನ ಪಡೆಯಲು ಸಭೆಯು ಸೂಚಿಸಿತು.

**ವಿಷಯ ಸಂಖ್ಯೆ 03 : ಮಿಮ್ಸ್ ಸಂಸ್ಥೆಯ ಕಾಲೇಜು ಹಾಗೂ ಹೊಂದಿಕೊಂಡಿರುವ ಬೋಧಕ ಆಸ್ಪತ್ರೆಯಲ್ಲಿ ವೆಚ್ಚ ಭರಿಸುತ್ತಿರುವ ವೇತನ, ಕಛೇರಿ ವೆಚ್ಚ, ಕಟ್ಟಡ ಕಾಮಗಾರಿ, ಉಪಕರಣ ಖರೀಧಿ ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದಡಿಯಲ್ಲಿ ಭರಿಸಿರುವ ವೆಚ್ಚಗಳಿಗೆ ಆರ್ಥಿಕ ಸಮಿತಿಯ ಮುಂದೆ ಮಂಡಿಸಿ ಸ್ಥಿರೀಕರಣ ಕೋರುವ ಬಗ್ಗೆ.**

| ಕ್ರ. ಸಂ. | ವಿವರಣೆ | ವೆಚ್ಚಗಳು ದಿನಾಂಕ: 01.04.2011 ರಿಂದ 31.03.2012 | | ವೆಚ್ಚಗಳು ದಿನಾಂಕ:01.04.2012 ರಿಂದ 31.10.2012 | |
|---|---|---|---|---|---|
| | | ಕಾಲೇಜು | ಆಸ್ಪತ್ರೆ | ಕಾಲೇಜು | ಆಸ್ಪತ್ರೆ |
| 01 | ವೇತನ | 1233.19 | 370.50 | 444.93 | 243.13 |
| 02 | ಕಛೇರಿ ವೆಚ್ಚ | 44.18 | 112.77 | 65.40 | 67.50 |
| 03 | ಉಪಕರಣ | 21.95 | 137.48 | 117.48 | 07.27 |
| 04 | ಪಿಠೋಪಕರಣ | 10.54 | – | – | – |
| 05 | ಗ್ರಂಥಭಂಡಾರ | 33.59 | – | 05.35 | – |
| 06 | ಕಟ್ಟಡ ಕಾಮಗಾರಿ | 761.86 | – | 152.11 | – |
| 07 | ಪರಿಶಿಷ್ಠಜಾತಿ/ ಪರಿಶಿಷ್ಠ ಪಂಗಡ ಉಪಯೋಜನೆ | 76.90 | – | 82.10 | – |
| 08 | ಔಷಧಿ ಖರೀಧಿ | – | 273.92 | – | 186.65 |
| 09 | ನಿರ್ವಹಣೆ | – | 03.43 | – | 25.84 |
| 10 | ಪಥ್ಯ ಆಹಾರ | – | – | – | 10.09 |
| ಒಟ್ಟು | | 2182.21 | 898.10 | 868.37 | 531.48 |

ಆರ್ಥಿಕ ನಿರ್ದೇಶಕರು.

**ತೀರ್ಮಾನ** :- ಮಿಮ್ಸ್ ಸಂಸ್ಥೆಯ 2011-12ನೇ ಹಾಗೂ 2012-13ನೇ ಸಾಲಿನ (ಅಕ್ಟೋಬರ್-2012ರವರೆಗೆ) ಕಾಲೇಜು ಮತ್ತು ಆಸ್ಪತ್ರೆಯ ಯೋಜನೆ ಹಾಗೂ ಯೋಜನೇತರಡಿಯಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ವೆಚ್ಚ ಭರಿಸಿರುವ ಬಗ್ಗೆ ವಿವರಣೆಯೊಂದಿಗೆ (ವಿವರಣೆಗಳನ್ನು ಲಗತ್ತಿಸಿದೆ) ಮಂಡಿಸಲು ಸೂಚಿಸಿ ಸ್ಥಿರೀಕರಣ ನೀಡಲಾಯಿತು.

**ವಿಷಯ ಸಂಖ್ಯೆ 04 : 2013-14 ನೇ ಸಾಲಿನ ಆಯವ್ಯಯ.**

**ತೀರ್ಮಾನ** :- ಸಂಸ್ಥೆಯ ಕಾಲೇಜು ಮತ್ತು ಬೋಧಕ ಆಸ್ಪತ್ರೆಯ 2013-14 ನೇ ಸಾಲಿನ ಆಯವ್ಯಯವನ್ನು ಸಭೆಯಲ್ಲಿ ಅವಲೋಕಿಸಿ ಆಯವ್ಯಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

**ವಿಷಯ ಸಂಖ್ಯೆ 05 : ಮಹಾಲೇಖಪಾಲಕರು ತಮ್ಮ ವರದಿಯಲ್ಲಿ ಹೆಚ್ಚುವರಿ ವಾರ್ಷಿಕ ವೇತನ ಬಡ್ತಿಯನ್ನು ಪಾವತಿಸಿರುವುದಕ್ಕೆ ಆಕ್ಷೇಪಣೆ ಮಾಡಿರುವ ಬಗ್ಗೆ.**

**ತೀರ್ಮಾನ**:- ಮೇಲ್ಕಂಡ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ನ್ಯಾಯಾಲಯಾದ ಆದೇಶದಂತೆ ಕ್ರಮ ವಹಿಸಲು ಸೂಚಿಸಲಾಯಿತು.

**ವಿಷಯ ಸಂಖ್ಯೆ 06 : ನೌಕರರ ಭವಿಷ್ಯನಿಧಿ ಅಳವಡಿಸುವ ಕುರಿತು.**

**ತೀರ್ಮಾನ** :- ಸಂಸ್ಥೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ನೌಕರರ ಭವಿಷ್ಯನಿಧಿ ಅಳಡಿಸುವ ಬಗ್ಗೆ ನಿಯಮಾನುಸಾರ ಕ್ರಮ ವಹಿಸಬೇಕೆಂದು ಆರ್ಥಿಕ ಸಮಿತಿ ತೀರ್ಮಾನಿಸಿತು.

**ವಿಷಯ ಸಂಖ್ಯೆ 07 : ವಯೋನಿವೃತ್ತಗೊಂಡು ಸಂಸ್ಥೆಯಲ್ಲಿನ ಬೋಧಕ ಸಿಬ್ಬಂದಿ ವರ್ಗದವರಿಗೆ ವೇತನ ನಿಗಧಿಪಡಿಸುವ ಬಗ್ಗೆ.**

**ತೀರ್ಮಾನ** :- ಬೋಧಕ ಸಿಬ್ಬಂದಿಯಲ್ಲಿ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರುಗಳು ವಯೋನಿವೃತ್ತಿಗೊಂಡ ಸಿಬ್ಬಂದಿ ನೇಮಕಾತಿ ಮಾಡಿಕೊಂಡಲ್ಲಿ ಕ್ರೂಢೀಕೃತ ವೇತನವಾಗಿ ವೇತನದಲ್ಲಿ ಪ್ರಾಧ್ಯಾಪಕರಿಗೆ ರೂ.90,000/-, ಸಹ ಪ್ರಾಧ್ಯಾಪಕರಿಗೆ ರೂ.80,000/- ಮತ್ತು ಸಹಾಯಕ ಪ್ರಾಧ್ಯಾಪಕರಿಗೆ ರೂ.70,000/- ಗಳನ್ನು ಪಾವತಿಸಲು ಆರ್ಥಿಕ ಸಮಿತಿ ತೀರ್ಮಾನಿಸಿತು.

ಆರ್ಥಿಕ ಸಲಹೆಗಾರರು

**ವಿಷಯ ಸಂಖ್ಯೆ 08 : ತುರ್ತು ಚಿಕಿತ್ಸಾ ವಿಭಾಗದ ವೈದ್ಯಾಧಿಕಾರಿಗಳ (ಸಿ.ಎಂ.ಓ) ವೇತನ ಶ್ರೇಣಿಯನ್ನು ಮಾರ್ಪಾಡು ಮಾಡುವ ಬಗ್ಗೆ.**

**ತೀರ್ಮಾನ** :- ಸಂಸ್ಥೆಯ ಹಿರಿಯ ತಜ್ಞ ವೈದ್ಯಾಧಿಕಾರಿಗಳ (ಸಿ.ಎಂ.ಓ) ಹುದ್ದೆ ಭರ್ತಿ ಮಾಡಲು ಅನುಮೋದನೆ ಪಡೆದಿರುವ ವೇತನ ಶ್ರೇಣಿ 15200-25650 ಸರಿಯಿದ್ದು ನಿಯಮಾನುಸಾರ ಸದರಿಯವರ ನೇಮಕಾತಿಯಾದ ದಿನಾಂಕ:10.12.2010ರಿಂದ ಬಾಕಿ ವೇತನ ಪಾವತಿಸುವಂತೆ ಆರ್ಥಿಕ ಸಮಿತಿ ತೀರ್ಮಾನಿಸಿತು.

**ವಿಷಯ ಸಂಖ್ಯೆ 09 : ವಯೋ ನಿವೃತ್ತಗೊಂಡು ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿ ವರ್ಗದವರಿಗೆ ವೇತನ ಪರಿಷ್ಕರಿಸುವ ಬಗ್ಗೆ**

**ತೀರ್ಮಾನ** :- ವಯೋ ನಿವೃತ್ತಿಗೊಂಡ ರಾಜ್ಯ ಸರ್ಕಾರಿ ನೌಕರರುಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಂಡಿರುವ ಸಿಬ್ಬಂದಿಗೆ ಕೆ.ಸಿ.ಎಸ್.ಆರ್ ನಿಯಮ 313(ಬಿ) ಪ್ರಕಾರ (ಪಿಂಚಣಿ ದಾಖಲಾತಿಗಳನ್ನು ಪರಿಶೀಲಿಸಿದಂತೆ) ಪರಿಷ್ಕೃತ ವೇತನದಲ್ಲಿ ವೇತನ ನಿಗಧಿಪಡಿಸಿ ಕ್ರಮವಹಿಸುವಂತೆ ಸೂಚಿಸಲಾಯಿತು.

**ವಿಷಯ ಸಂಖ್ಯೆ 10 : ಸಹಾಯಕ ಸಮಾಜ ಕಲ್ಯಾಣಾಧಿಕಾರಿಯವರಿಗೆ ಮೊಬೈಲ್ ಭತ್ಯೆಯನ್ನು ನೀಡುವ ಕುರಿತು.**

**ತೀರ್ಮಾನ** :- ಸಮಾಜ ಕಲ್ಯಾಣಾಧಿಕಾರಿಯವರಿಗೆ ಮೋಬೈಲ್ ಭತ್ಯೆಯನ್ನು ಮಾಸಿಕ ರೂ. 250/-ಗಳನ್ನು ದೂರವಾಣಿ ಬಿಲ್ಲಿನ ಮೇಲೆ ಪಾವತಿಸಲು ಆರ್ಥಿಕ ಸಮಿತಿ ತೀರ್ಮಾನಿಸಿತು.

**ವಿಷಯ ಸಂಖ್ಯೆ 11 : ಮಿಮ್ಸ್ ಸಂಸ್ಥೆಯ ಅಂಗರಚನಾ ಶಾಸ್ತ್ರ ವಿಭಾಗ ಮತ್ತು ವಿಧಿವೈದ್ಯಶಾಸ್ತ್ರ ವಿಭಾಗಗಳಲಿ ಗ್ರೂಪ್'ಡಿ ನೌಕರರನ್ನು ನೇಮಿಸಿಕೊಳ್ಳುವ ಕುರಿತು.**

**ತೀರ್ಮಾನ** :- ಮಿಮ್ಸ್ ಸಂಸ್ಥೆಯಲ್ಲಿ ಅಂಗರಚನಾಶಾಸ್ತ್ರ ಮತ್ತು ವಿಧಿವೈದ್ಯಶಾಸ್ತ್ರ ವಿಭಾಗಗಳಲ್ಲಿ ಕ್ರಮವಾಗಿ 4 ಮತ್ತು 2 ಜನ ಗ್ರೂಪ್'ಡಿ' ನೌಕರರನ್ನು ಸಂಸ್ಥೆಯಲ್ಲಿ ಖಾಲಿ ಇರುವ ಗ್ರೂಪ್'ಡಿ' (ಸ್ವೀಪರ್ಸ್) ಹುದ್ದೆಯ ಎದುರಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ಮಾಹೆಯಾನ ರೂ.9,000/-ಗಳ ಸಂಚಿತ ವೇತನ ಪಾವತಿಸಲು ಆರ್ಥಿಕ ಸಮಿತಿ ತೀರ್ಮಾನಿಸಿತು.

ಆರ್ಥಿಕ ಸಲಹೆಗಾರರು

**ವಿಷಯ ಸಂಖ್ಯೆ 12 : ಮಿಮ್ಸ್ ಕಟ್ಟಡಗಳ ಕಾಮಗಾರಿಗಳ ಅನುದಾನ ಮೊತ್ತವನ್ನು ಡಿಪಾಜಿಟ್ ಮಾಡಿರುವ ಬಗ್ಗೆ.**

**ತೀರ್ಮಾನ** :- ಮಿಮ್ಸ್ ಸಂಸ್ಥೆಯ ಕಟ್ಟಡ ಕಾಮಗಾರಿಗಳಿಗೆ ಸಂಬಂಧಿಸಿದ ಕಾಮಗಾರಿ ಮೊತ್ತ ರೂ.183.40ಲಕ್ಷಗಳನ್ನು ಮುಂಚಿತವಾಗಿ ಡಿಪಾಜಿಟ್ ಮಾಡಿರುವುದನ್ನು ಆರ್ಥಿಕ ಸಮಿತಿ ಅನುಮೋದಿಸಿತು

| | | |
|---|---|---|
| ಲೆಕ್ಕ ಶಿರ್ಷಿಕೆ 4210 | - | ರೂ.150.40ಲಕ್ಷಗಳು |
| ಲೆಕ್ಕ ಶಿರ್ಷಿಕೆ ಎಸ್.ಸಿ.ಪಿ ಮತ್ತು ಎಸ್.ಟಿ.ಪಿ | - | ರೂ.33.00ಲಕ್ಷಗಳು |
| **ಒಟ್ಟು** | - | **ರೂ.183.40ಲಕ್ಷಗಳು** |

**ವಿಷಯ ಸಂಖ್ಯೆ 13 : ಕ್ಯಾನ್ಸರ್ ಕೇಂದ್ರದ ಕಟ್ಟಡಕ್ಕೆ ಮೊಸಾಯಿಕ್ ನೆಲಹಾಸು ಬದಲು ವಿಟ್ರಿಫೈಡ್ ಟೈಲ್ಸ್ ಅಳವಡಿಸುವ ಬಗ್ಗೆ.**

**ತೀರ್ಮಾನ** :- ಮೇಲ್ಕಂಡ ವಿಷಯದ ಬಗ್ಗೆ ವಿಟ್ರಿಫೈಡ್ ಟೈಲ್ಸ್ ಅಳವಡಿಸಲು ಆರ್ಥಿಕ ಸಮಿತಿ ಅನುಮೋದಿಸಿತು. ಸದರಿ ಮೊತ್ತವನ್ನು ಸಂಸ್ಥೆಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸುವಂತೆ ಅನುಮೋದಿಸಿತು

**ವಿಷಯ ಸಂಖ್ಯೆ 14 : ಸಂಸ್ಥೆಯ ಕಟ್ಟಡ ಕಾಮಗಾರಿ ಪರಿಶೀಲನಾ ಸಭೆಯ ನಡವಳಿಗಳನ್ನು ಅನುಮೋದನೆ ಕುರಿತು.**

**ತೀರ್ಮಾನ** :- ದಿನಾಂಕ:29.08.2012 ರಂದು ಸಂಸ್ಥೆಯಲ್ಲಿ ನಡೆದ ಮಿಮ್ಸ್ ವರ್ಕ್ಸ್ ಕಮಿಟಿಯ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ವಿವಿಧ ಕಟ್ಟಡ ಪ್ರಗತಿ ಪರಿಶಿಲನಾ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.

**ವಿಷಯ ಸಂಖ್ಯೆ 14(ಅ) : 2012-13ನೇ ಸಾಲಿನ ಸಂಸ್ಥೆಯ ಉಪಕರಣ ಖರೀದಿ ಸಮಿತಿಯ ನಡವಳಿಗಳ ಅನುಮೋದನೆ ಕುರಿತು.**

**ತೀರ್ಮಾನ** :- ಮೇಲ್ಕಂಡ ವಿಷಯದಲ್ಲಿ 2012-13ನೇ ಸಾಲಿನಲ್ಲಿ ಬೇಕಾಗುವ ಉಪಕರಣಗಳ ಅಂದಾಜು ಮೊತ್ತ ರೂ.4.00ಕೋಟಿಗಳಿಗೆ ಸಂಬಂಧಿಸಿದಂತೆ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಿತು ಮತ್ತು ನಿಯಮಾನುಸಾರ ಟೆಂಡರ್ ಪ್ರಕ್ರಿಯೇ ನಡೆಸಿ ಉಪಕರಣಗಳನ್ನು ಖರೀದಿಸಲು ಅನುಮೋದನೆ ನೀಡಲಾಯಿತು.

ಅಧೀಕ್ಷಕರು

**ವಿಷಯ ಸಂಖ್ಯೆ 15 : ಮಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆ ಆವರಣದಲ್ಲಿರುವ ರಕ್ತನಿಧಿ ಕೇಂದ್ರ ಕಟ್ಟಡವನ್ನು ಮೇಲ್ದರ್ಜೆಗೆ ವಿಸ್ತರಿಸಲು ಅನುಮೋದನೆ ಕೋರಿ.**

**ತೀರ್ಮಾನ** :- ಮಿಮ್ಸ್ ಸಂಸ್ಥೆಯ ರಕ್ತನಿಧಿ ಕೇಂದ್ರದ ಕಟ್ಟಡವನ್ನು ವಿಸ್ತರಿಸುವ ಬದಲು ಹೆಚ್ಚುವರಿ ಉಪಕರಣಗಳನ್ನು ಅಳವಡಿಸಲು ರಕ್ತ ನಿಧಿ ಕೇಂದ್ರದ ಮೇಲೆ ಹೆಚ್ಚುವರಿ ಕಟ್ಟಡ ನಿರ್ಮಿಸುವ ಸಂಬಂಧ ಮೆ॥ ನಿರ್ಮಿತಿ ಕೇಂದ್ರ ಮಂಡ್ಯ ರವರ ಮೂಲಕ ಪಡೆದಿರುವ ರೂ.49.75ಲಕ್ಷಗಳ ಅಂದಾಜು ಪಟ್ಟಿಯಲ್ಲಿ ಈಗಾಗಲೇ ಅನುಮೋದನೆ ಪಡೆದು ಸ್ವೀಕರಿಸಿರುವ ಅನುದಾನ ರೂ.18.60ಲಕ್ಷಗಳನ್ನು ಕಳೆದು ಬಾಕಿ ರೂ.31.15ಲಕ್ಷಗಳಿಗೆ ಆರ್ಥಿಕ ಸಮಿತಿ ಅನುಮೋದನೆ ನೀಡಿತು. ರೂ.31.15 ಲಕ್ಷಗಳನ್ನು ಸಂಸ್ಥೆಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸುವಂತೆ ಆರ್ಥಿಕ ಸಮಿತಿ ಅನುಮೋದನೆ ನೀಡಿತು.

**ವಿಷಯ ಸಂಖ್ಯೆ 16 : ಮಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಸಣ್ಣಪುಟ್ಟ ಕಾಮಗಾರಿ ಮತ್ತು ರಿಪೇರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ.**

**ತೀರ್ಮಾನ** :- :ಮಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಸಣ್ಣಪುಟ್ಟ ಕಾಮಗಾರಿ ಮತ್ತು ರಿಪೇರಿ ಕಾಮಗಾರಿಗಳನ್ನು ಅಭಿವೃದ್ಧಿ ಪಡಿಸುವ ಸಂಬಂಧ ಆರ್ಥಿಕ ಸಮಿತಿ ಅನುಮೋದನೆ ನೀಡಿತು. ಹಾಗೂ ಪ್ರತಿಯೊಂದು ಕಾಮಗಾರಿಗಳ ಅಂದಾಜು ಪಟ್ಟಿಗೆ ಸರ್ಕಾರದ ಅನುಮತಿ ಪಡೆದು ಕಾಮಗಾರಿ ನಡೆಸಲು ಸಮಿತಿಯು ನಿರ್ಣಯಿಸಿತು.

**ವಿಷಯ ಸಂಖ್ಯೆ 17 : ಮಿಮ್ಸ್ ಸಂಸ್ಥೆಯ ಆವರಣದಲ್ಲಿ ಹೊಸದಾಗಿ ಆಸ್ಪತ್ರೆ ಕಟ್ಟಡವನ್ನು ನಿರ್ಮಿಸುವ ಕುರಿತು.**

**ತೀರ್ಮಾನ**:- ಮಿಮ್ಸ್ ಸಂಸ್ಥೆಯ ಆವರಣದಲ್ಲಿ ಹೊಸದಾಗಿ ಆಸ್ಪತ್ರೆ ಕಟ್ಟಡವನ್ನು ನಿರ್ಮಿಸುವ ಕುರಿತು ಸಮಿತಿಯು ಅನುಮೋದನೆ ನೀಡಿತು. ಹಾಗೂ ಆಸ್ಪತ್ರೆ ನಿರ್ಮಿಸುವ ಬಗ್ಗೆ ಕಟ್ಟಡದ ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲು ಆರ್ಥಿಕ ಸಮಿತಿ ಸೂಚಿಸಿತು.

**ವಿಷಯ ಸಂಖ್ಯೆ 18 : ಮಿಮ್ಸ್ ಸಂಸ್ಥೆಯ ಶಸ್ತ್ರಚಿಕಿತ್ಸಾ ಕೊಠಡಿಯನ್ನು ನವೀಕರಿಸುವ ಬಗ್ಗೆ.**

**ತೀರ್ಮಾನ** :- ಮಿಮ್ಸ್ ಸಂಸ್ಥೆಯ ಶಸ್ತ್ರಚಿಕಿತ್ಸಾ ಕೊಠಡಿಯನ್ನು ನವೀಕರಿಸುವ ಬಗ್ಗೆ ಸಮಿತಿಯು ಚರ್ಚಿಸಿ ಶಸ್ತ್ರಚಿಕಿತ್ಸಾ ಕೊಠಡಿಯನ್ನು ನವೀಕರಿಸಲು ಅನುಮೋದನೆ ನೀಡಲಾಯಿತು. ನವೀಕರಿಸಲು ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯಿಂದ / ನಿರ್ಮಿತಿ ಕೇಂದ್ರ / ಭೂಸೇನಾ ನಿಗಮ ಏಜೆನ್ಸಿಗಳಿಂದ ಪಡೆದುಕೊಂಡು ಮುಂದಿನ ಕ್ರಮ ವಹಿಸಲು ಆರ್ಥಿಕ ಸಮಿತಿ ಸೂಚಿಸಿತು.

ಆರ್ಥಿಕ ಸಲಹೆಗಾರರು

**ವಿಷಯ ಸಂಖ್ಯೆ 19 : ಆರ್ಥಿಕ ಸಲಹೆಗಾರರಿಗೆ ಹೆಚ್ಚುವರಿ ಗೌರವ ಧನ ನೀಡುವ ಬಗ್ಗೆ.**

**ತೀರ್ಮಾನ** :- ಆರ್ಥಿಕ ಸಲಹೆಗಾರರಿಗೆ ಹೆಚ್ಚುವರಿ ಗೌರವ ಧನ ನೀಡುವ ಬಗ್ಗೆ ಸಮಿತಿಯು ಚರ್ಚಿಸಿ ದಿನಾಂಕ:01.04.2012 ರಿಂದ ಅನ್ವಯವಾಗುವಂತೆ ರೂ.30,000/-ಗಳಿಗೆ ವೇತನವನ್ನು ಹೆಚ್ಚಿಸಿ ಆರ್ಥಿಕ ಸಮಿತಿ ತೀರ್ಮಾನಿಸಿತು.

**ವಿಷಯ ಸಂಖ್ಯೆ 20 : ತುರ್ತು ಚಿಕಿತ್ಸಾ ಅಪಘಾತ ವಿಭಾಗದ ವೈದ್ಯಾಧಿಕಾರಿಗಳ (ಸಿ.ಎಂ.ಓ) ತುರ್ತು ಚಿಕಿತ್ಸಾ ಭತ್ಯೆ ಮತ್ತು ಸ್ನಾತಕೋತ್ತರ ಭತ್ಯೆ ನೀಡುವ ಬಗ್ಗೆ.**

**ತೀರ್ಮಾನ** :- ಈ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ / ತಜ್ಞ ವೈದ್ಯಾಧಿಕಾರಿಗಳಿಗೆ (ಸಿ.ಎಂ.ಓ) ತುರ್ತು ಚಿಕಿತ್ಸಾ ಭತ್ಯೆ ಹಾಗೂ ಸ್ನಾತಕೋತ್ತರ ಭತ್ಯೆ ಮಂಜೂರು ಮಾಡುವ ಬಗ್ಗೆ ಕಡತವನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲು ಆರ್ಥಿಕ ಸಮಿತಿ ಸೂಚಿಸಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

| | | |
|---|---|---|
| ಆರ್ಥಿಕ ಸಲಹೆಗಾರರು ಹಾಗೂ,<br>ಸದಸ್ಯ ಕಾರ್ಯದರ್ಶಿಗಳು,<br>ಆರ್ಥಿಕ ಸಮಿತಿ<br>ಮಿಮ್ಸ್, ಮಂಡ್ಯ | ನಿರ್ದೇಶಕರು<br>ಹಾಗೂ ಸದಸ್ಯರು,<br>ಆರ್ಥಿಕ ಸಮಿತಿ,<br>ಮಿಮ್ಸ್, ಮಂಡ್ಯ. | ಸರ್ಕಾರದ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ<br>ಇಲಾಖೆ, (ವೈದ್ಯಕೀಯ ಶಿಕ್ಷಣ), ಹಾಗೂ<br>ಅಧ್ಯಕ್ಷರು ಆರ್ಥಿಕ ಸಮಿತಿ,<br>ಮಿಮ್ಸ್, ಮಂಡ್ಯ. |